# ಸಂನ್ಯಾಸ ಮತ್ತು ಬ್ರಹ್ಮಚರ್ಯ

ಸ್ವಾಮಿ ಸುಬೋಧಾನಂದ

**ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಸುಬೋಧಾನಂದಜಿ ಮಹಾರಾಜರು ಮದ್ರಾಸಿನ "ಯಂಗ್ ಮೆನ್ಸ್ ಅಸೋಸಿಯೇಷನ್"ನಲ್ಲಿ ೧೮೯೭ರಲ್ಲಿ ನೀಡಿದ ಭಾಷಣ ವಿದು. ಇದರ ಕನ್ನಡಾನುವಾದ ಮಾಡಿದವರು ಈಗ ಬೇಲೂರು ಮಠದ ತರಬೇತಿ ಕೇಂದ್ರದಲ್ಲಿರುವ ಬ್ರಹ್ಮಚಾರಿ ಮುಕುಂದ. ನವೆಂಬರ್ ೨೭ರಂದು ಸ್ವಾಮಿ ಸುಬೋಧಾನಂದರ ಜಯಂತಿ.**

**ಸರ್ವವಿಧದ** ಸ್ವಾರ್ಥೋದ್ದೇಶಗಳನ್ನು ಹಾಗೂ ಕಾಮನೆಗಳನ್ನು ತ್ಯಜಿಸುವುದೇ ಸಂನ್ಯಾಸ. ಸಂನ್ಯಾಸವೇನೆಂಬುದನ್ನು ನಾನು ನಿಮಗೆ ವಿವರಿಸಿ ಹೇಳುವುದಕ್ಕಿಂತ ಮುನ್ನ ಬ್ರಹ್ಮಚರ್ಯದ ಕುರಿತು ಹೇಳುವುದು ಆವಶ್ಯಕ; ಏಕೆಂದರೆ ಈ ಎರಡನೆಯದನ್ನು ಸಿದ್ಧಿಸಿಕೊಳ್ಳದೆ ಯಾವ ಸಂನ್ಯಾಸ ಅಥವಾ ತ್ಯಾಗವೂ ಸಾಧ್ಯವಾಗದು. ಬ್ರಹ್ಮಚರ್ಯದ ಅನುಷ್ಠಾನಕ್ಕೆ ಒಬ್ಬನು ತನ್ನ ಆಹಾರದ ವಿಷಯದಲ್ಲಿ, ಹವ್ಯಾಸಗಳಲ್ಲಿ ಹಾಗೂ ತನ್ನ ಆಲೋಚನೆಗಳಲ್ಲಿ ನಿಯಮಿತನಾಗಿರಬೇಕಾಗುತ್ತದೆ. ಈ ಹಂತದಲ್ಲಿ ವಿಧಿಸಲ್ಪಟ್ಟ ಎಲ್ಲ ಕಟ್ಟುಕಟ್ಟಳೆಗಳಲ್ಲೂ ಶಾಸ್ತ್ರಗಳು ಹೆಚ್ಚು ಒತ್ತು ನೀಡುವುದು ಲೈಂಗಿಕ ಪ್ರವೃತ್ತಿಯ ಸ್ವಾಮಿತ್ವದ ಮೇಲೆ. ಸಾಧಕನು ತನ್ನೊಳಗಿನ ಪಶು ಸ್ವಭಾವವನ್ನು ಪ್ರತ್ಯಕ್ಷವಾಗಿಯೊ ಅಥವಾ ಪರೋಕ್ಷವಾಗಿಯೊ ಜಾಗ್ರತಗೊಳಿಸುವ ಯಾವುದೇ ಕಾರ್ಯವನ್ನು ಮಾಡಕೂಡದು ಅಥವಾ ಯಾವುದೇ ವಿಷಯವನ್ನು ಗ್ರಹಿಸಕೂಡದು. ಈ ರೀತಿಯಲ್ಲಿ ಒಬ್ಬನು ತನ್ನ ಮನಸ್ಸನ್ನು ಸಂಪೂರ್ಣವಾಗಿ ಹತೋಟಿಯಲ್ಲಿರಿಸಬೇಕು. ಯಾರು ತನ್ನ ಇಂದ್ರಿಯ, ಮನಗಳಿಗೆ ದಾಸನಲ್ಲವೊ ಆದರೆ ಅದಕ್ಕೆ ಬದಲಾಗಿ ಯಾರಿಗೆ ಅವುಗಳು ದಾಸರೊ, ಅವನೇ ನಿಜವಾದ ಬ್ರಹ್ಮಚಾರಿ. ಜಗತ್ತಿನ ಎಲ್ಲ ಧರ್ಮಗಳು ಬೋಧಿಸುವುದು ಈ ಬ್ರಹ್ಮಚರ್ಯ ಹಾಗೂ ಸಂನ್ಯಾಸಗಳನ್ನೆ. ಅವೆರಡರ ಉದ್ದೇಶವೂ ಒಂದೇ, ಮನಸ್ಸನ್ನು ವಿಷಯ ಚಿಂತನೆಗಳಿಂದ ಮೇಲಕ್ಕೆತ್ತಿ ಭಗವಂತನೆಡೆಗೆ ಹರಿಸುವುದು. ಯಾವಾಗ ಮನಸ್ಸು ಭಗವಂತನನ್ನು ಮುಟ್ಟುತ್ತದೊ ಆಗ ದಿವ್ಯಾನಂದವನ್ನು ಅನುಭವಿಸುತ್ತದೆ. ಭಗವಂತನ ಸಾಕಾರ ರೂಪವನ್ನೊ ಅಥವಾ ನಿರಾಕಾರ ತತ್ತ್ವವನ್ನೊ ಉಪಾಸಿಸುವುದರಿಂದ ಈ ಮನಸ್ಸನ್ನು ಮೇಲಕ್ಕೆತ್ತಬಹುದು. ಯಾರು ಭಗವಂತನ ಸಾಕಾರ ರೂಪದಲ್ಲಿ ಭಕ್ತಿ ಇರಿಸಿರುವರೊ, ಅವರು ಅವನನ್ನು ತಮ್ಮ ಅತಿ ನಿಕಟವರ್ತಿಯೆಂದೂ ಅತಿ ಪ್ರಿಯನಾದವನೆಂದೂ ಭಾವಿಸುತ್ತಾರೆ; ಅವರು ತಮ್ಮ ಜೀವನದ ಪ್ರತಿಕ್ಷಣದಲ್ಲಿಯೂ ಆತನಲ್ಲಿ ಭಾವೈಕ್ಯವನ್ನು ಅನುಭವಿಸುತ್ತಾರೆ. ಅವರು ಅವನೊಂದಿಗೆ ಕ್ರೀಡಿಸುತ್ತಾರೆ, ಅವನಲ್ಲೇ ವಾಸಿಸುತ್ತಾರೆ ಹಾಗೂ ಅವನಲ್ಲೇ ನಡೆದಾಡುತ್ತಾರೆ. ಯಾರು ಭಗವಂತನನ್ನು ನಿರಾಕಾರನೆಂದು ಪೂಜಿಸುವರೊ ಆತನನ್ನು ಸರ್ವವ್ಯಾಪಿಯೆಂದು ತಿಳಿಯುತ್ತ ಅತಿಶಯಾನಂದವನ್ನು ಅನುಭವಿಸುತ್ತಾರೆ; ಹೀಗೆ ಅವರೂ ಸಹ ಅವನಲ್ಲೇ ವಾಸಿಸುತ್ತ ಚರಿಸುತ್ತಾರೆ. ಇಂದ್ರಿಯಾತೀತತೆಯ ದೃಷ್ಟಿಯಿಂದ ನೋಡಿದಲ್ಲಿ ಈ ಎರಡು ಬಗೆಯ ಭಕ್ತರೂ ಅನುಭವಿಸುವ ಆನಂದದ ತೀವ್ರತೆ ಒಂದೇ ಬಗೆಯಾಗಿರುತ್ತದೆ.

ಮಾನವನು ತನ್ನ ಇಂದ್ರಿಯಗಳ ಆಕರ್ಷಣೆಗಳಿಂದ ಮೇಲಕ್ಕೇರದೆ ಭಕ್ತನೆನಿಸಿಕೊಳ್ಳಲಾರ. ಆದ್ದರಿಂದ ಒಬ್ಬ ಭಕ್ತನ ಮನಸ್ಸು ಪ್ರಾಪಂಚಿಕ ಆಸೆ ಆಕಾಂಕ್ಷೆಗಳಿಂದ ಬಹುದೂರದಲ್ಲೇ ಇರುತ್ತದೆ. ಆತ ತನ್ನ ಕುಟುಂಬದ, ಸ್ನೇಹಿತರ ಅಥವಾ ಬಂಧುಗಳ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅವನ ಮನಸ್ಸು ಅವನ ಜೀವನದ ಪ್ರತಿಕ್ಷಣದಲ್ಲೂ ಸಂಪೂರ್ಣವಾಗಿ ಭಗವಂತನೊಡನಿದ್ದು, ಭಗವಂತನನ್ನೆ ಆಶ್ರಯಿಸಿರುವುದರಿಂದ ಅವನಿಗೆ ಅವರಾರ ಕುರಿತೂ ಕರ್ತವ್ಯವಿರದು. ಅವನು ಪ್ರಪಂಚದತ್ತ ದೃಷ್ಟಿ ಹಾಯಿಸಿದರೆ ಅವನಿಗೆ ಈ ಮರ್ತ್ಯ ಜಗತ್ತು ಕಾಣಿಸದು; ಬದಲಾಗಿ ಭಗವನ್ಮಯವಾದ ಜಗತ್ತನ್ನೇ ಕಾಣುವನು. ಏಕೆಂದರೆ ಅವನಿಗೆ ಸಕಲ ಪುರುಷ, ಸ್ತ್ರೀ, ಪಶು, ಗೃಹ, ವೃಕ್ಷ, ಆಕಾಶ, ಪೃಥ್ವಿಗಳಲ್ಲಿಯೂ ಅದೇ ಭಗವಂತನು ಆವರಿಸಿರುವುದಾಗಿ ಕಂಡುಬರುತ್ತದೆ. ಇದಕ್ಕೆ ಜೀವಂತವಾದ, ಮೂರ್ತಿಮತ್ತಾದ ಉದಾಹರಣೆಗಳೆಂದರೆ ಸಂತರ ಜೀವನಗಳು. ಅಂತಹ ಜೀವನಗಳ ಅಧ್ಯಯನದಿಂದ ನಮ್ಮ ಜೀವನಯಾತ್ರೆಯಲ್ಲಿ ಸೂಕ್ತಹಾದಿಯ ಮಾರ್ಗದರ್ಶನ ದೊರೆಯುತ್ತದೆ. ಮಹಾಪುರುಷನು ನಡೆದಂತಹ ಹಾದಿಯೇ ನಿಜವಾದ ಹಾದಿ. ಲಾಂಗ್‌ಫೆಲೊ (*Longfellow*) ಹೇಳುವಂತೆ ಅವರು "ಕಾಲವೆಂಬಮಳಲ ಮೇಲೆ ಹೆಜ್ಜೆ ಗುರುತು ಬಿಡು ವವರು."

ಗಭೀರ ಜೀವನಜಲಧಿಯಲಿ ಸಾಗಿಹ
ಮತ್ತೊಂದು ಹೆಜ್ಜೆ ಗುರುತನು ನೋಡುತ
ಗತಿಹೀನ ಭಗ್ನನೌಕಿ ಸೋದರನೋರ್ವ
ಬಹುಶಃ ಪುನರ್ಭರವಸೆಯ ತಾಳ್ವನು.

ಒಮ್ಮೆ ನದಿಯಾದ ಶ್ರೇಷ್ಠ ಸಂತ ಹಾಗೂ ಭಕ್ತಿಮಾರ್ಗ ಪ್ರವರ್ತಕ ಶ್ರೀಚೈತನ್ಯದೇವನು ದಾಕ್ಷಿಣಾತ್ಯ ದೇಶಗಳಲ್ಲಿ ಸಂಚರಿಸುತ್ತ ಒಬ್ಬ ದೈವಭಕ್ತನಾದ ಧನಿಕ ಮರಾಠಿ ಬ್ರಾಹ್ಮಣನ ಅತಿಥಿಯಾದನು. ಈ ಬ್ರಾಹ್ಮಣನಿಗೆ ಅತಿ ಪ್ರಿಯನಾದ ಗೋಪಾಲ ಭಟ್ಟನೆಂಬ ಹೆಸರಿನ ಮಗನಿದ್ದ. ಬ್ರಾಹ್ಮಣನು ದೈವಭಕ್ತನಾದ್ದರಿಂದ ತನ್ನ ಹೆಚ್ಚಿನ ಸಮಯವನ್ನೆಲ್ಲ ತನ್ನ ಇಷ್ಟದೇವರ ಪೂಜೆಯಲ್ಲಿ, ನಾಮ ಸಂಕೀರ್ತನೆಯಲ್ಲಿ ಕಳೆಯುತ್ತಿದ್ದನು. ಆತ ತನ್ನ ಮನೆಗೆ ಬಂದ ಯಾವುದೇ ಅತಿಥಿಯನ್ನೂ ಸತ್ಕರಿಸದೆ ಹಾಗೆಯೇ ಕಳುಹಿಸು

ತ್ತಿರಲಿಲ್ಲ. ಸಾಧು ಸಂತರನ್ನು ಅತಿಥಿಗಳನ್ನಾಗಿ ಬರಮಾಡಿಕೊಂಡು, ಅವರಿಗೆ ಪುಷ್ಕಳ ಭೋಜನವಿತ್ತು, ವಸನಗಳನ್ನು ಉಡುಗೊರೆಯಾಗಿ ನೀಡಿ ಅವರಿಂದ ತನ್ನ ಜೀವನವನ್ನು ನಿರೂಪಿಸುವಂತಹ ಉಪದೇಶ ಗಳನ್ನು ಹೇಳಿಸಿ ಕೇಳುವುದರಲ್ಲೇ ಆತನ ಪ್ರಮುಖ ಆನಂದ ನೆಲೆಸಿತ್ತು. ಆದರೆ ಅವನ ಮಗ ಗೋಪಾಲನದು ಇನ್ನೂ ಉನ್ನತವಾದ ದೃಷ್ಟಿ. ಕೇವಲ ಸಾಧುಗಳ ಮಾತುಗಳನ್ನಾಲಿಸುವುದರಲ್ಲೋ ಅಥವಾ ಭಗ ವಂತನ ವಿಗ್ರಹಾರಾಧನೆಯಲ್ಲೋ ಅವನಿಗೆ ತೃಪ್ತಿಯುಂಟಾಗದು; ಸಾಕ್ಷಾತ್ತಾಗಿ ಭಗವಂತನನ್ನೇ ಕಾಣುವ ಬಯಕೆ ಅವನಿಗೆ. ಈ ಉದ್ದೇಶ ದಿಂದ ಆತ ಸದಾ ಏಕಾಂತ ಸ್ಥಳಕ್ಕೆ ಹೋಗಿ ತನ್ನ ಸಮಯವನ್ನೆಲ್ಲ ತನ್ನ ಪ್ರಿಯತಮನ ಸಂಸರ್ಗದಲ್ಲಿ ಕಳೆಯಲು ಬಯಸುತ್ತಿದ್ದ. ಹೀಗಾಗಿ ಅವನು ಈಗ ತನ್ನ ತಂದೆಯ ಅತಿಥಿಯಾದ ಶ್ರೀಚೈತನ್ಯ ದೇವನ ಅಗಾಧ ಭಕ್ತಿಯನ್ನು ಕಂಡು ಅವಾಕ್ಕಾದ. ಚೈತನ್ಯನ ಕಣ್ಣುಗಳು ಪ್ರೇಮಾಶ್ರುವಿನ ಪ್ರವಾಹವನ್ನೇ ಸುರಿಸುತ್ತಿರುವಂತೆ ಅವನಿಗೆ ಭಾಸ ವಾಯಿತು. ಈಗ ಅವನಿಗೆ ಶ್ರೀಚೈತನ್ಯನಂತೆ, ಸಾಧು ಸಂತರಂತೆ ಭಿಕ್ಷಾ ವಲಂಬಿಯಾಗಿ ಏಕಾಂಗಿಯಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯುವ ಇಚ್ಛೆ ಯುಂಟಾಯಿತು. ಶ್ರೀಚೈತನ್ಯನೂ ಸಹ ಆ ಹುಡುಗನ ಒಳ್ಳೆಯತನ, ಸರಳತೆ, ಪಾವಿತ್ರ್ಯ ಹಾಗೂ ಭಕ್ತಿಗಳನ್ನು ನೋಡಿ ಅವನೆಡೆಗೆ ಅದೆಷ್ಟು ಆಕರ್ಷಿತನಾದನೆಂದರೆ ಅವನ ತಂದೆಯ ಎದುರು ಅವನನ್ನು ಶ್ಲಾಘಿಸುತ್ತ ನುಡಿದನು, "ಈ ನಿನ್ನ ಹುಡುಗ ಮುಂದೆ ಒಬ್ಬ ದೊಡ್ಡ ಭಕ್ತನಾಗುತ್ತಾನೆ," ಎಂದು.

ಶ್ರೀಚೈತನ್ಯನು ಹೊರಟುಹೋದಮೇಲೆ ಹುಡುಗನ ಹೃದಯವೂ ಅವನನ್ನೇ ಹಿಂಬಾಲಿಸಿತು; ಆದರೆ ಅವನಿಗೀಗ ತನ್ನ ಮನದ ಬಯಕೆ ಯನ್ನು ಈಡೇರಿಸುವ ಬಗೆಯೆ ತೋಚದಾಯಿತು, ಏಕೆಂದರೆ ಅವನ ತಂದೆಗೆ ಅವನ ಮೇಲಿರುವ ವಿಶೇಷವಾದ ವಾತ್ಸಲ್ಯ ಅವನ ಪಾಲಿಗೆ ಈಗೊಂದು ದೊಡ್ಡ ತಡೆಯಾಗಿ ಪರಿಣಮಿಸಿತ್ತು. ಇಷ್ಟಾಗಿಯೂ ಆತ ತಂದೆಗೆ ತನ್ನ ಮನೋಭಿಲಾಷೆಯನ್ನು ವ್ಯಕ್ತಪಡಿಸಿಯೇ ಬಿಟ್ಟ. ತಂದೆಯೊ, ತನ್ನ ಮಗು ಎಲ್ಲಿ ಗುಪ್ತವಾಗಿ ತನ್ನನ್ನು ತೊರೆದು ದಿಕ್ಕಿಲ್ಲದ ಸ್ಥಳಕ್ಕೆ ಹೋಗಿಬಿಡುವುದೊ ಎಂದು ಹೆದರಿ ಅವನಿಗೆ ಗೊತ್ತಾಗದಂತೆ ಅವನ ಮೇಲೊಂದು ವಿಶೇಷ ಕಾವಲಿರಿಸಿದ್ದ. ಆದರೆ ಮನಸ್ಸಿದ್ದೆಡೆ ಮಾರ್ಗವಲ್ಲವೇ? ಒಂದು ಮಧ್ಯರಾತ್ರಿ ಎಲ್ಲರೂ ನಿದ್ರಿಸುತ್ತಿದ್ದಾರೆ. ಗೋಪಾಲನ ಮೇಲೆ ವಿಶೇಷವಾಗಿ ಕಾವಲಿಟ್ಟಿರುವ ಸೇವಕರೂ ಗಾಢನಿದ್ರೆಯಲ್ಲಿದ್ದಾರೆ. ಮನೆಯನ್ನು ತ್ಯಜಿಸಿದ ಗೋಪಾಲ ತನ್ನ ಮನೆಮಂದಿಯವರು ತನ್ನನ್ನು ಪತ್ತೆಹಚ್ಚಬಹು ದೆಂದು ಹೆದರಿ ಮುಖ್ಯರಸ್ತೆಯಲ್ಲಿ ಹೋಗದೆ ಕಾಡಿನ ದಾರಿಯಾಗಿ ನಡೆದನು. ಅವನ ಬಳಿ, ಧರಿಸಿರುವ ಉಡುಪೊಂದನ್ನು ಬಿಟ್ಟರೆ ಬೇರೆ ನ್ನೇನೂ ಇರಲಿಲ್ಲ. ಇಡೀ ದಿನವನ್ನು ಪ್ರಯಾಣದಲ್ಲೇ ಕಳೆದ ಅವನಿಗೆ ಹಸಿವೆಯಾಗತೊಡಗಿತು. ಇನ್ನೂ ಪುಟ್ಟ ಬಾಲಕನಾದ ಅವನು ಈಗ ಅಳಲಾರಂಭಿಸಿದ, ಭಗವಂತನನ್ನು ಪ್ರಾರ್ಥಿಸಲಾರಂಭಿಸಿದ. ಸ್ವಲ್ಪ ಸಮಯದ ನಂತರ ವೃದ್ಧನೊಬ್ಬನು ಅವನೆಡೆಗೇ ಬರುತ್ತಿರುವುದು ಕಂಡಿತು. ಆ ವೃದ್ಧನು ಅವನ ರೋದನಕ್ಕೆ ಕಾರಣವೇನೆಂದು ಕೇಳಲು, ಬಾಲಕ ತಾನು ಬಹಳ ಹಸಿದಿರುವುದಾಗಿ ಹೇಳಿದ. ವೃದ್ಧನು ಕೂಡಲೇ ಅವನಿಗೆ ತಿನ್ನಲು ನೀಡಿ, ತಾನೂ ಕಾಡಿನ ಮಾರ್ಗವಾಗಿಯೇ ಪಯಣಿಸಬೇಕಾಗಿದೆ ಎಂದನು. ಅರಣ್ಯವು ಅತಿ ದೊಡ್ಡದಾಗಿದ್ದು ಅದನ್ನು ದಾಟಲು ಹಲವು ದಿನಗಳೇ ಬೇಕಾಗುವುದರಿಂದ ತಾನು ಹುಡುಗನೊಂದಿಗೆ ಬರುವುದಾಗಿ ಸಮಾಧಾನ ನೀಡಿದ.

ಹುಡುಗನಲ್ಲೀಗ ಧನ್ಯತೆಯ ಭಾವವುಕ್ಕಿತು. ಅಷ್ಟೇ ಅಲ್ಲ, ಈಗ ಅವನು ಹಸಿದರೆ ವೃದ್ಧನಿಂದ ತಿನಿಸುಗಳೊಂದಿಗೆ ಅವನಿಗೆ ಸವಿನುಡಿಗಳೂ ಸಿಗುತ್ತಿದ್ದವು. ಒಂದು ದಿನ ಅವನು ವೃದ್ಧನನ್ನು ಅವನಾರೆಂದು ವಿಚಾರಿಸಿ, ತನ್ನ ಕುರಿತು ಇಷ್ಟೊಂದು ಕಾಳಜಿಯನ್ನು ವಹಿಸುತ್ತಿರುವ ಕಾರಣವನ್ನು ಕೇಳಿದ. ಆ ಮುದುಕ ಕೂಡಲೆ ನುಡಿದ, ಅವನು ಯಾರಿಗಾಗಿ ಹುಡುಕುತ್ತಿರುವನೊ ಅವನೇ ತಾನು ಎಂದು. ಹುಡುಗ ಉತ್ತರಿಸಿದ: "ನಾನು ಅರಸುತ್ತಿರುವ ವ್ಯಕ್ತಿ ನಿನ್ನಂತೆ ವೃದ್ಧನಲ್ಲ. ಆತನು ಯುವಕ, ಚೆಲುವ ಮತ್ತು ಆತನ ತಲೆಯಲ್ಲಿ ನವಿಲುಗರಿ ಇದೆ. ನೀನು ಅದೇ ನನ್ನ ಮೆಚ್ಚಿನ ಶ್ರೀಕೃಷ್ಣನೆಂದು ಹೇಗೆ ತಾನೆ ನಂಬಲಿ?" ಹುಡುಗನ ಮುಗ್ಧ ಭಕ್ತಿಗೆ ಮೆಚ್ಚಿ ವೃದ್ಧನು ಕೂಡಲೆ ವಿಶ್ವಸುಂದರ ಯುವಕನಾದ ಶ್ರೀಕೃಷ್ಣನಾಗಿ ಮಂದಹಾಸ ಬೀರುತ್ತ ಅವನೆದುರು ನಿಂತನು. ಆಗ ಗೋಪಾಲನ ಭಾವೋದ್ವೇಗ ವನ್ನು ಯಾರು ತಾನೆ ವರ್ಣಿಸಬಲ್ಲರು? ಅವನ ಭಾವಾವೇಗವು ಕಡಿಮೆಯಾಗಲು, ಶ್ರೀಕೃಷ್ಣನು ಆತನಿಗೆ ಕಾಡಿನಿಂದ ಹೊರ ಹೋಗುವ ಅತಿಸುಲಭದ ಮಾರ್ಗವನ್ನು ತೋರಿಸಿ, ವೃಂದಾವನದಲ್ಲಿ ಮತ್ತೊಮ್ಮೆ ಭೇಟಿಯಾಗುವುದಾಗಿ ಅವನಿಗೆ ಮಾತುಕೊಟ್ಟು, ಹುಡುಗನ ಮನಸ್ಸನ್ನು ಪ್ರೇಮಾನಂದದಲ್ಲಿ ಮುಳುಗಿಸುತ್ತ ಅಂತ ರ್ಧಾನನಾದನು. ಗೋಪಾಲನು ಕೆಲವೇ ತಿಂಗಳುಗಳಲ್ಲಿ ಶ್ರೀ ವೃಂದಾವನವನ್ನು ಸೇರಿ, ಅಲ್ಲಿ ತನ್ನ ಪ್ರಿಯತಮ ಶ್ರೀಕೃಷ್ಣನೊಡನೆ ಭಾವಸಂಸರ್ಗದಲ್ಲಿ ತನ್ನ ಜೀವನವನ್ನೆಲ್ಲ ಕಳೆದನೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಈಗ, ಗೋಪಾಲಭಟ್ಟನ ಜೀವನವನ್ನು ಅಧ್ಯಯನ ಮಾಡಿದ ಮೇಲೆ ನಮಗೆ ತಿಳಿದುಬರುವುದೇನೆಂದರೆ ಆತನ ಅದಮ್ಯವಾದ ಸ್ಥಿರತೆ ಹಾಗೂ ದೃಢವಾದ ಶ್ರದ್ಧೆಗಳು ಆತನನ್ನು ದೇವ ಮಾನವ ನನ್ನಾಗಿ ಮಾಡಿದವು, ಎಂದು. ಒಬ್ಬ ನಿಜವಾದ ಮಾನವನ ನಿರ್ಮಾಣದಲ್ಲಿ ಸರಳ ಶ್ರದ್ಧೆ ಹಾಗೂ ಪ್ರಬಲ ಇಚ್ಛಾಶಕ್ತಿಗಳು ಅತ್ಯಾವಶ್ಯಕ.

ನಮ್ಮ ಗುರುದೇವರು ಹೇಳುತ್ತಿದ್ದರು: "ನಾವು ಒಂದು ಸೂಜಿಯ ಕಣ್ಣಿನ ಮೂಲಕ ದಾರವನ್ನು ತೂರಿಸಬೇಕೆಂದಿದ್ದರೆ ಅದರ ಮೊನೆಯಲ್ಲಿರುವ ವಿಕ್ಷಿಪ್ತವಾದ ದಾರದ ಎಳೆಗಳನ್ನು ಹುರಿಗೊಳಿಸ ಬೇಕಾಗುತ್ತದೆ. ಇಲ್ಲದಿದ್ದರೆ ದಾರವು ಕಣ್ಣಿನೊಳಗೆ ತೂರಿ ಹೋಗದು. ಅಂತೆಯೇ ನಾವು ನಮ್ಮ ಮನಸ್ಸನ್ನು ಭಗವಂತನೆಡೆಗೆ ತಿರುಗಿಸಬೇಕಾದರೆ ಅದನ್ನು ಮೊದಲು ಎಲ್ಲ ಬಾಹ್ಯವಸ್ತುಗಳಿಂದ ಎಳೆದು ತಂದು ಒಂದೆಡೆಗೆ ಏಕಾಗ್ರಗೊಳಿಸಬೇಕಾಗುತ್ತದೆ. ಆದರೆ ಚೆದುರಿಹೋದ ಮನಸ್ಸನ್ನು ಏಕಾಗ್ರಗೊಳಿಸುವುದಾದರೂ ಹೇಗೆ? ಮನಸ್ಸು ಪತ್ನಿ, ಮಕ್ಕಳು, ಹೆಸರು, ಕೀರ್ತಿ, ವಿಷಯಸುಖಗಳೆಡೆಗೆ ಹರಿದು ಹಂಚಿಹೋಗಿರುವುದಲ್ಲ? ಭಗವಂತನಲ್ಲೊ ಅಥವಾ ತನ್ನ ಗುರುವಿನಲ್ಲೊ ಶ್ರದ್ಧೆ ಇರಿಸುವುದರ ಮೂಲಕ ಇದನ್ನು ಸಾಧಿಸ ಬಹುದು.

ಗುರುವನ್ನು ಮನಃಪೂರ್ವಕವಾಗಿ ಪ್ರೀತಿಸಬೇಕು. ಆತನ

ಆಜ್ಞೆಯನ್ನು ಪಾಲಿಸಬೇಕು. ಹೀಗೆ ಗುರುವಿನಲ್ಲಿ ಭಕ್ತಿಯಿರಿಸಿದರೆ ಸಹಜವಾಗಿಯೇ ಇತರೆಲ್ಲ ಆಕರ್ಷಣೆಗಳನ್ನು ಕಳೆದುಕೊಂಡು ಮನಸ್ಸು ಏಕಾಗ್ರತೆಯನ್ನು ಹೊಂದುತ್ತದೆ. ಸ್ವಂತ ಗುರುವಿನ ಮೇಲಿನ ಶ್ರದ್ಧೆಯು ಕ್ರಮೇಣ ಬಲಿಯುತ್ತದೆ. ಆದ್ದರಿಂದ ಅದಿನ್ನೂ ಅಂಕುರಿಸುವ ಮೊದಲೇ ಅದನ್ನು ಕಟುಟೀಕೆಗೆ ಒಳಪಡಿಸಬಾರದು; ಏಕೆಂದರೆ ಸಸಿ ದೊಡ್ಡದಾಗುವ ವೇಳೆಯಲ್ಲಿ ಅದನ್ನು ದನಕರುಗಳಿಂದ ನಾಶವಾಗದಂತೆ ರಕ್ಷಿಸಲು ಸುತ್ತಲೂ ಬೇಲಿ ಹಾಕಬೇಕಾಗುತ್ತದೆ. ಕೊಳದಲ್ಲಿ ಅತ್ಯಲ್ಪ ನೀರಿರುವಾಗ ಅದನ್ನು ಕದಡಬಾರದು. ಇಲ್ಲ ದಿದ್ದರೆ ನೀರು ಕಲುಷಿತಗೊಂಡು, ಕುಡಿಯಲು ಉಪಯೋಗವಾಗದೆ, ಮೊದಲಿಗಿಂತ ಹೆಚ್ಚು ಬಾಯಾರಿ ನಾವು ಮನೆಗೆ ಹಿಂತಿರುಗಬೇಕಾದೀತು. ಇದನ್ನು ನಮಗೆ ನಮ್ಮ ಗುರುದೇವರು ಹೇಳಿಕೊಟ್ಟರು.

ಆದ್ದರಿಂದ ನಿಮ್ಮಲ್ಲಿ ನನ್ನ ಕಳಕಳಿಯ ವಿನಂತಿ ಇಷ್ಟೆ, ನಿಮ್ಮ ವಿಶ್ವಾಸವನ್ನು ವಿವೇಚನಾರಹಿತ ಪ್ರಶ್ನೆಗಳಿಗೊ, ಕಟುತರ ಟೀಕೆಗಳಿಗೊ ಗುರಿಪಡಿಸದಿರಿ. ಶ್ರದ್ಧೆ ವೈಯಕ್ತಿಕವಾದದ್ದು. ಅದನ್ನು ಪ್ರಶ್ನಿಸುವ ಹಕ್ಕು ಮತ್ತೊಬ್ಬನಿಗಿಲ್ಲ. ಜಗತ್ತಿನ ಪ್ರತಿಯೊಬ್ಬನು ಒಂದಿಲ್ಲ ಇನ್ನೊಂದರಲ್ಲಿ ಶ್ರದ್ಧೆಯಿರಿಸಿರುತ್ತಾನೆ, ಅದು ಮತ್ತೊಬ್ಬನಿಗೆ ಸರಿಕಾಣದೆ ಇರಬಹುದು. ಸರಳ ವಿಶ್ವಾಸದಿಂದ ಆಗುವುದು ಒಳ್ಳೆಯದೆ ಹೊರತು ಯಾವ ಕೆಡಕೂ ಆಗದೆಂಬುದನ್ನು ನಿಮಗೆ ನಾನು ಒತ್ತಿ ಹೇಳುತ್ತೇನೆ. ಆದ್ದರಿಂದ ಮತ್ತೊಮ್ಮೆ ಹೇಳುತ್ತೇನೆ, ನಿಮ್ಮ ಅಥವಾ ಪರರ ವಿಶ್ವಾಸವನ್ನು ನಿರ್ದಾಕ್ಷಿಣ್ಯ, ಅವಹೇಳನಕರ ಪ್ರಶ್ನೆಗಳಿಗೆ ಗುರಿಪಡಿಸಬೇಡಿ; ಏಕೆಂದರೆ ಸಂಶಯವೇ ಮೃತ್ಯು. ಒಂದು ನಾಣ್ನುಡಿ ಹೇಳುತ್ತದೆ, ವಿಶ್ವಾಸ ಭಗವಂತನ ನಿಕಟವರ್ತಿ ಎಂಬುದಾಗಿ. ಸಂಶಯವು ಆತನಿಂದ ಬಹುದೂರ. ನಿಮ್ಮ ಮನಸ್ಸನ್ನು ನಮ್ರತೆಯೆಂಬ ಸದ್ಗುಣದಿಂದ ಅಲಂಕರಿಸಿಕೊಳ್ಳಿ. ಏಕೆಂದರೆ ನೀವು ಮೊದಲು ನಮ್ರರಾಗದೆ ಏನನ್ನೂ ಕಲಿಯಲಾರಿರಿ. ನಮ್ಮ ಗುರುದೇವರು ಹೇಳುತ್ತಿದ್ದರು: ಮಳೆಯ ನೀರು ಎತ್ತರದ ದಿಣ್ಣೆಯ ಮೇಲೆ ನಿಲ್ಲದು, ಸದಾ ತಗ್ಗು ಪ್ರದೇಶವನ್ನೇ ಅರಸುತ್ತದೆ. ಅಂತೆಯೇ ಅಭಿಮಾನದಿಂದ ಉಬ್ಬಿದವರಲ್ಲಿ ಶ್ರದ್ಧೆ ನಿಲ್ಲದು; ಏಕೆಂದರೆ ಶ್ರದ್ಧೆ ಯಾವಾಗಲೂ ದೀನ-ನಮ್ರ ಹೃದಯಗಳನ್ನೇ ಹುಡುಕುತ್ತದೆ.

ಜನರು ಎಲ್ಲಿಯವರೆಗೂ ಶ್ರೇಷ್ಠತಮ ಸತ್ಯದ ಸಾಕ್ಷಾತ್ಕಾರಕ್ಕಾಗಿ ಉದ್ಯಮಶೀಲರಾಗರೊ, ಅಲ್ಲಿಯವರೆಗೂ ಅವರ ನಡುವೆ ವಿವಾದವಿದ್ದೇ ಇರುತ್ತದೆ. ಸತ್ಯವು ಗೋಚರವಾಗಲು, ಈ ಜಗತ್ತನ್ನು ಹಿಂಸೆ, ಹತ್ಯೆ, ರಕ್ತಪಾತಗಳಲ್ಲಿ ಮುಳುಗಿಸುವ ಅಜ್ಞಾನಾಂಧಕಾರವು ತನ್ನ ಸಹಚರರಾದ ಸಂಕುಚಿತತೆ ಹಾಗೂ ಮತಾಂಧತೆಗಳೊಂದಿಗೆ ನಾಶವಾಗುವುದು. ನಮ್ಮ ಶ್ರೀಗುರುದೇವರು ಹೇಳುತ್ತಿದ್ದರು: "ಜನ ಯಾವಾಗಲೂ ತಮ್ಮ ಜಮೀನು, ಆಸ್ತಿ ಮತ್ತು ಜಗತ್ತಿನ ಇನ್ನಿತರ ಸಣ್ಣ ಪುಟ್ಟ ವಿಷಯಗಳಿಗಾಗಿ ಜಗಳವಾಡುತ್ತಲೇ ಇರುತ್ತಾರೆ. 'ಇದು ನನ್ನ ಪಾಲಿನ ಜಮೀನು, ಅದಿಷ್ಟು ನಿನ್ನದು' ಎನ್ನುತ್ತ ಭೂಮಿಯ ಮೇಲೆ ವಿಧವಿಧವಾಗಿ ಗೆರೆಯೆಳೆಯುತ್ತಾ ವಿಭಾಗಿಸುತ್ತಾರೆ—ತಮ್ಮ ಆಸ್ತಿಯನ್ನು ಇತರರಿಂದ ಪ್ರತ್ಯೇಕಿಸಲು. ಆದರೆ ಭೂಮಿಯ ಮೇಲಿರುವ ಈ ಆಗಸವನ್ನು ಗೆರೆಯೆಳೆದು ವಿಭಜಿಸಲಾಗದ್ದರಿಂದ ಹಾಗೂ ಅದು ಯಾರಿಗೂ ಸೇರದ್ದರಿಂದ ಅದರ ವಿಷಯದಲ್ಲಿ ಯಾರೂ ಜಗಳ ಕಾಯುವುದಿಲ್ಲ. ಹೀಗೆಯೇ ಈ ಮನಸ್ಸು ಜಗತ್ತಿನ ವಿಷಯಗಳಿಂದ ಮೇಲಕ್ಕೇರಿದಾಗ ಎಲ್ಲರಿಗೂ ಸಮಾನವಾದ ಗುರಿಯನ್ನು ತಲುಪುವುದರಿಂದ ಆತನಿಗೆ ಯಾವ ಜಗಳಕ್ಕೂ ಅವಕಾಶವಿರದು."

ಜನಗಳಿಗಾಗಿಯೇ ಮಧುರವಾಗಿ ಹಾಡುತ್ತಲಿದ್ದ ಮಧ್ಯಯುಗದ ಒಬ್ಬ ಶ್ರೇಷ್ಠ ವಂಗಭಕ್ತನಾದ ಶ್ರೀರಾಮಪ್ರಸಾದನು ಏನು ಹೇಳುವನೆಂದು ಕೇಳೋಣ. ಈ ಶ್ರೇಷ್ಠಭಕ್ತನು ಎಂದಿಗೂ ಕಾವ್ಯ ರಚನೆಗಾಗೆಂದೇ ಕುಳಿತವನಲ್ಲ. ಆದರೆ ಭಾವವುಕ್ಕಿ ಬಂದಾಗ ಆತ ದಿವ್ಯ ಪ್ರೇಮವನ್ನು ಸೂಸುವ ಅತಿ ಸುಂದರವಾದ ಆಶುಕವಿತೆಗಳನ್ನು ಹಾಡುತ್ತಿದ್ದ. ಶ್ರೀರಾಮಪ್ರಸಾದನ ಹೃದಯಸಿಂಹಾಸನದಲ್ಲಿ ಮಂಡಿತಳಾಗಿರುವ ಸನಾತನಿಯಾದ ಜಗನ್ಮಾತೆಯೇ ಈ ಅಮರಗೀತೆಗಳನ್ನು ಹಾಡುವಂತೆ ತನ್ನ ಮಗುವನ್ನು ಚೋದಿಸುತ್ತಿದ್ದಳೆಂದು ಹಲವರು ನಂಬಿದ್ದರು. ಆತನು ಹಾಡುತ್ತಾನೆ: "ಓ ನನ್ನ ಮನವೆ, ಎಂತಾದರೂ ಸರಿ ನೀನಾರಾಧಿಸು ಮಾತೆಯ; ಗುರುವಿತ್ತ ಮಂತ್ರವನೆಂದಿಗೂ ಮರೆಯದಿರು; ನೆಲಕೊರಗಿ ವಿಶ್ರಮಿಸುತಿಹುದೇ ದೀರ್ಘದಂಡ ನಮಸ್ಕಾರ, ಸುಷುಪ್ತಿಯೇ ಗಾಢಜ್ಞಾನವಾಗಲಿ ನಿನಗೆ; ಉಣ್ಣುವುದೆ ಹೋಮ, ಆಲಿಪ ಶಬ್ದಗಳೆಲ್ಲ ಆಕೆಯದೇ ಮಂತ್ರ; ಐವತ್ತಕ್ಕರಗಳೆಲ್ಲ ಆಕೆಯ ವಿವಿಧ ನಾಮಗಳಾಗಿರೆ, ಶ್ರೀ ರಾಮಪ್ರಸಾದನು ಅತ್ಯಾನಂದದಿ ಘೋಷಿಪನೆಲ್ಲರಿಗೂ, 'ತಾಯಿ ಎಲ್ಲರೊಳಿರುವಳು' ಎಂದು. ಆದ್ದರಿಂದ, ಓ ನನ್ನ ಮನವೆ, ರಸ್ತೆಯಲಿ ನಡೆವಾಗ ನೀ ನಿಶ್ಚಿತವಾಗಿ ತಿಳಿ ತಾಯಿಯ ಸುತ್ತು ಬರುತಲಿರುವೆಯೆಂದು." ಇಲ್ಲಿಗೆ ಹಾಡು ಕೊನೆಗೊಳ್ಳುತ್ತದೆ. ಅಂತಹ ವ್ಯಕ್ತಿಗೆ ತನ್ನ ಸಹಮಾನವರೊಂದಿಗೆ ಜಗಳವಾಡಲು ತಾನೆ ಹೇಗೆ ಸಾಧ್ಯ? ಅಂತಹವನೇ ನಿಜವಾದ ಸಂನ್ಯಾಸಿ.

ಒಮ್ಮೆ ದಕ್ಷಿಣೇಶ್ವರದ ದೇವಾಲಯಕ್ಕೆ ಮಲಿನವಾಗಿ ಕಾಣುವ ವ್ಯಕ್ತಿಯೊಬ್ಬ ಬಂದನು. ಆತ ದೇವಾಲಯದ ಪ್ರಾಂಗಣವನ್ನು ಹೊಕ್ಕು ಅದನ್ನು ಗಲೀಜು ಮಾಡುತ್ತಿರುವುದನ್ನು ನೋಡಿದ ದೇವಾಲಯದ ಆಳುಗಳು ಅವನನ್ನು ಸರಿಯಾಗಿ ತರಾಟೆಗೆ ತೆಗೆದುಕೊಂಡು ಅಲ್ಲಿಂದ ಹೊರದೂಡಲು ಉದ್ಯುಕ್ತರಾದರು. ಅಲ್ಲೇ ತೋಟದಲ್ಲಿ ವಾಸಿಸುತ್ತಿದ್ದ ನಮ್ಮ ಗುರುದೇವರು ಅವನನ್ನು ಕಂಡು, ಈತ ನಿಜವಾದ ಸಂನ್ಯಾಸಿ ಹಾಗೂ ಒಬ್ಬ ಮಹಾಯೋಗಿಯೆಂದು ಗುರುತಿಸಿ, ಆತನಿಗೆ ತೊಂದರೆ ಕೊಡದಿರುವಂತೆ ಆಳುಗಳಿಗೆ ಹೇಳಿದರು. ಅವರ ಮಾತನ್ನು ಪಾಲಿಸಿದ ಆಳುಗಳು ಆತನ ತಂಟೆಗೆ ಹೋಗಲಿಲ್ಲ. ಆದರೆ ಬಾಹ್ಯದಲ್ಲಿ ಕೊಳಕು ಕೊಳಕಾಗಿ ಕಂಡುಬರುತ್ತಿದ್ದ ಅವನನ್ನು ದೇವಾಲಯದೊಳಕ್ಕೆ ಮಾತ್ರ ಬಿಡಲಿಲ್ಲ. ಸ್ವಲ್ಪ ಸಮಯದ ಬಳಿಕ ಆ ಸಾಧು ದೇವಾಲಯದ ಮುಂದೆ ನಿಂತು ದೇವಿಯನ್ನು ಸ್ತುತಿಸಲಾರಂಭಿಸಿದ. ಅದು ಎಷ್ಟು ಮಧುರಮಯವಾಗಿತ್ತೆಂದರೆ ಸ್ವಲ್ಪ ಹೊತ್ತಿಗೆ ಮುಂಚೆಯಷ್ಟೆ ಅವನನ್ನು ಹೊಡೆಯಲು ಹೊರಟಿದ್ದವರ ಕಣ್ಣುಗಳಿಂದಲೂ ಅಶ್ರು ಸುರಿಯಲಾರಂಭಿಸಿತು. ನಂತರ, ಉಂಡೆಸೆದ ಎಂಜಲನ್ನು ಉಣ್ಣುತ್ತಿದ್ದ ನಾಯಿಯೊಂದನ್ನು ಕಂಡು, ಅದರೆಡೆಗೆ ಹೋಗಿ, ಅದನ್ನು ನೇವರಿಸುತ್ತ ಅದರೊಂದಿಗೆ ಮಾತನಾಡಲಾರಂಭಿಸಿದ: "ಅದೇಕೆ ಗೆಳೆಯ, ನೀನೊಬ್ಬನೆ ಒಂಟಿಯಾಗಿ ತಿನ್ನುತ್ತಿದ್ದೀಯೆ? ನಿನ್ನ ಆಹಾರವನ್ನು

ನನ್ನೊಂದಿಗೆ ಹಂಚಿಕೊಳ್ಳುವುದಿಲ್ಲವೇ?" ಹೀಗೆನ್ನುತ್ತ ನಾಯಿಯೊಂದಿಗೆ ತಾನೂ ಆ ಎಂಜಲನ್ನು ತಿನ್ನತೊಡಗಿದ. ಅವನಿನ್ನೇನು ತೋಟದಿಂದ ಹೊರಹೋಗಬೇಕು, ಅಷ್ಟರಲ್ಲಿ ಸಜ್ಜನನೊಬ್ಬನು ಅವನ ಬಳಿಸಾರಿ, ಕೈಜೋಡಿಸಿ ವಿನಂತಿಸಿಕೊಂಡ, "ಹೇ ಗುರುವೇ, ನನಗೆ ನಿಜವಾದ ಜ್ಞಾನದ ರಹಸ್ಯವನ್ನು ಬೋಧಿಸು" ಎಂದು. ಆದಕ್ಕೆ ಆ ಸಾಧು ಉತ್ತರಿಸಿದ : "ಮಗು, ಎಂದು ನೀನು ಗಂಗೆಯ ಪವಿತ್ರ ವಾರಿಗೂ ಈ ಚರಂಡಿಯ ನೀರಿಗೂ ನಡುವೆ ಅಂತರವನ್ನು ಕಾಣೆಯೋ ಆಗ ಮಾತ್ರ ನಿನಗೆ ನಿಜವಾದ ಜ್ಞಾನವನ್ನರಿಯುವ ಸಾಮರ್ಥ್ಯ ಬರುತ್ತದೆ." ಒಬ್ಬ ನಿಜವಾದ ಸಂನ್ಯಾಸಿಯು ಸಾಧು ಹಾಗೂ ಪಾಪಿಯ ನಡುವೆ ಭೇದವನ್ನು ಕಾಣನು. ಏಕೆಂದರೆ ಅವನಿಗೆ ತೋರುತ್ತದೆ, ಒಬ್ಬನೇ ಭಗವಂತ ವಿವಿಧ ವೇಷಗಳನ್ನು ಧರಿಸಿ ಈ ಇಬ್ಬರಲ್ಲೂ ಇರುವನು, ಎಂಬುದಾಗಿ. ಅಂತಹವನನ್ನೇ ಸಿದ್ಧ ಪುರುಷನೆನ್ನುವರು. ಅವನು ಪ್ರಭಾತ ಕಾಲದ ವಾಯುವಿನಂತೆ ಮುಕ್ತನಾಗಿ, ಇಬ್ಬನಿಯ ನವೀನತೆಯಿಂದ ಕೂಡಿದವನಾಗಿ ಜಗತ್ತಿನ ಎಲ್ಲೆಡೆಗಳಲ್ಲೂ ಸಂಚರಿಸುತ್ತ ಎಲ್ಲರೆಡೆಗೂ ಶಾಂತಿ ಮತ್ತು ಆನಂದಗಳನ್ನು ವರ್ಷಿಸುತ್ತಾನೆ. ❋

# ಪ್ರಹಸನ ಪ್ರಸಂಗ

**"ಸಂಕಟ ಬಂದಾಗ ವೆಂಕಟರಮಣ"** ಎಂಬ ಗಾದೆಯ ಮಾತಿದೆ ಕನ್ನಡದಲ್ಲಿ. ನಾವು ಸಂಕಟದ ಸಮಯದಲ್ಲಿ ದೇವರನ್ನು ಕೂಗಿ ಕರೆಯುತ್ತೇವೆ, ಅವನಿಗೆ ಏನೇನೊ ಹರಕೆ ಹೊರುತ್ತೇವೆ. ಸಂಕಟ ಪರಿಹಾರವಾದಮೇಲೆ ಎಲ್ಲ ಮರೆತೇ ಬಿಡುತ್ತೇವೆ. ದೇವರೊಂದಿಗೆ ವ್ಯಾಪಾರ ನಡೆಸುವಾಗಲೂ ನಾವು ಮೋಸ ಮಾಡುತ್ತೇವೆ.

ಒಂದು ವಿಮಾನ ಬಹಳ ಎತ್ತರದಲ್ಲಿ ಹಾರುತ್ತಿದೆ. ಅದರಲ್ಲಿ ಕೆಲವೇ ಪ್ರಯಾಣಿಕರಿದ್ದರು. ವಿಮಾನದಲ್ಲಿ ಏನೋ ಅಪಾಯ ಸೂಚನೆ ಕಂಡುಬಂತು. ಅದರಲ್ಲಿದ್ದವರು ಒಬ್ಬೊಬ್ಬರಾಗಿ ಪ್ಯಾರಾಚೂಟಿನ ಮೂಲಕ ಕೆಳಗೆ ಹಾರತೊಡಗಿದರು. ಒಬ್ಬನ ಪ್ಯಾರಾಚೂಟ್ ಮಾತ್ರ ತೆರೆಯಲೇ ಇಲ್ಲ. ಅವನು ರಭಸದಿಂದ ಕೆಳಗೆ ಬೀಳುತ್ತಿದ್ದಾನೆ. ಅವನು ತಿರುಪತಿ ಭಕ್ತ. "ಹೇ ತಿರುಪತಿ ತಿಮ್ಮಪ್ಪ, ನನ್ನ ಪ್ರಾಣವನ್ನು ಉಳಿಸು. ನಿನಗೆ ಒಂದು ಕಲ್ಯಾಣಸೇವೆ ಮಾಡಿಸುತ್ತೇನೆ" ಎಂದು ಬೇಡಿಕೊಂಡನು.

ತಿಮ್ಮಪ್ಪನ ಪ್ರಭಾವವೊ ಯಾರ ಪ್ರಭಾವವೊ ಅಂತೂ ಇದ್ದಕ್ಕಿದ್ದಂತೆಯೇ ಪ್ಯಾರಾಚೂಟ್ ತೆರೆಯಿತು. ಅವನಿಗೆ ಪ್ರಾಣಭಯ ಹೋಯಿತು. ಈಗ ಕಲ್ಯಾಣ ಸೇವೆಯ ವಿಷಯ ಮನಸ್ಸಿಗೆ ಬಂತು. ಅವನು ಯೋಚಿಸಿದ : "ತಿಮ್ಮಪ್ಪನಿಗೆ ಎಷ್ಟೋ ಮದುವೆಯಾಗುತ್ತಿರುತ್ತದೆ. ನನ್ನ ಕಲ್ಯಾಣ ಸೇವೆ ಇಲ್ಲದಿದ್ದರೆ ಏನೂ ನಷ್ಟವಿಲ್ಲ. ಇದೇ ಹಣದಲ್ಲಿ ನನ್ನ ಮಗಳ ಮದುವೆ ಮಾಡಿದರಾಯಿತು."

ಅಷ್ಟರಲ್ಲಿ ಅವನು ನಿಧಾನವಾಗಿ ಭೂಮಿಯನ್ನು ಮುಟ್ಟಿದ. ಹಠಾತ್ತನೆ ಒಂದು ಸ್ಫೋಟ ಉಂಟಾಯಿತು. ಅವನು ಏನಾಯಿತು ಎಂದು ಯೋಚಿಸುವುದಕ್ಕೆ ಮುಂಚೆಯೇ ಸತ್ತುಹೋಗಿದ್ದ. ಅವನು ಭೂಮಿಯ ಮೇಲೆ ಕಾಲಿಟ್ಟ ಜಾಗದಲ್ಲಿ ಒಂದು ನೆಲಬಾಂಬನ್ನು ಇಟ್ಟಿದ್ದರು.

❋ ❋ ❋ ❋

**ನಾವು ಪ್ರಸಕ್ತ ಪರಿಸ್ಥಿತಿಯಿಂದ ದೂರವಿರುತ್ತೇವೆ.** ನಮ್ಮದೇ ಕಲ್ಪನಾ ಲೋಕದಲ್ಲಿ ವಿಹರಿಸುತ್ತ, ಭವಿಷ್ಯ ಸುಖದ ಕನಸು ಕಾಣುತ್ತ, ಚಿಂತೆ ಕಾತರತೆಗಳಲ್ಲಿ ತೊಳಲಾಡುತ್ತ ಈಗ ನಾವೇನು ಮಾಡಬೇಕೆಂಬುದನ್ನು ಮರೆತೇಬಿಡುತ್ತೇವೆ. ವರ್ತಮಾನ ಕ್ಷಣವನ್ನು ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ.

ಒಂದು ವಿಶ್ವವಿದ್ಯಾನಿಲಯ. ಅಲ್ಲಿಂದ ಮೂವರು ಪ್ರೊಫೆಸರರು ಮಾತನಾಡುತ್ತ ಹೊರಟರು. ಅವರು ರೈಲ್ವೆ ಸ್ಟೇಷನ್ನಿಗೆ ಹೋಗಬೇಕಿತ್ತು. ಅವರು ಮಾತಿನಲ್ಲೇ ತನ್ಮಯರಾಗಿ, ಎಷ್ಟೋ ದಾರಿಯನ್ನು ತಪ್ಪಿದರೂ ಕೊನೆಗೂ ಸ್ಟೇಷನ್ನನ್ನು ತಲುಪಿದರು. ಅವರ ಅದೃಷ್ಟಕ್ಕೆ ಅಂದು ರೈಲು ತುಂಬ ತಡವಾಗಿ ಬರುವುದಿತ್ತು. ಸ್ಟೇಷನ್ನಿಗೆ ಬಂದ ಮೇಲೂ ಅವರ ಸಂಭಾಷಣೆ ಮುಗಿಯಲಿಲ್ಲ. ಅದರಲ್ಲೇ ತನ್ಮಯರಾಗಿದ್ದರು. ರೈಲು ಬಂದದ್ದೂ ಅವರಿಗೆ ಅರಿವಾಗಲಿಲ್ಲ. ಆ ರೈಲು ಬಂದು ಹೊರಡುವುದರ ಬಗೆಗಿನ ಪ್ರಕಟನೆಗಳೂ ಅವರ ಕಿವಿಗೆ ಬೀಳಲೇ ಇಲ್ಲ. ಆದರೆ ರೈಲು ಹೊರಟಾಗ ಅವರಿಗೆ ಪ್ರಸ್ತುತ ಪ್ರಜ್ಞೆ ಬಂತು. ಕೂಡಲೇ ಅವರು ರೈಲಿನ ಕಡೆ ಧಾವಿಸಿದರು. ಇಬ್ಬರು ಪ್ರೊಫೆಸರರು ಹೇಗೊ ರೈಲು ಹತ್ತಿಯೇಬಿಟ್ಟರು. ಮತ್ತೊಬ್ಬನು ಕೆಳಗೇ ಉಳಿಯಬೇಕಾಯಿತು—ರೈಲು ಹತ್ತಲು ಆಗಲೇ ಇಲ್ಲ. ಪೆಚ್ಚಾದ ಮುಖ ಹಾಕಿಕೊಂಡು ರೈಲು ಹೋಗುವುದನ್ನೇ ನೋಡುತ್ತಿದ್ದ.

ಇದನ್ನೆಲ್ಲ ಗಮನಿಸುತ್ತಿದ್ದ ರೈಲ್ವೆ ಅಧಿಕಾರಿಯೊಬ್ಬನು ಆ ಪ್ರೊಫೆಸರನನ್ನು ಕುರಿತು ಹೇಳಿದ: "ನಿಮ್ಮಲ್ಲಿ ಇಬ್ಬರಾದರೂ ರೈಲು ಹತ್ತುವುದಕ್ಕೆ ಸಾಧ್ಯವಾಯಿತಲ್ಲ, ಅಷ್ಟೇ ಸಮಾಧಾನ."

ಪ್ರೊಫೆಸರ್ ನಿಟ್ಟುಸಿರುಬಿಟ್ಟು ಹೇಳಿದ : "ಅದೇನೊ ನಿಜ. ಆದರೆ ಅವರಿಬ್ಬರು ನನ್ನನ್ನು ಬೀಳ್ಕೊಡಲು ಬಂದವರು !" ❋

ಆಶ್ರಮದ ವಿಶೇಷ ಕಾರ್ಯಕ್ರಮಗಳು

ನವೆಂಬರ್ 2001

| | | |
|---|---|---|
| 14 | ಬುಧವಾರ | ಶ್ರೀ ಶ್ರೀ ಕಾಳೀಪೂಜಾ |
| 18 | ಭಾನುವಾರ | ಆಧ್ಯಾತ್ಮಿಕ ಶಿಬಿರ<br>ಮಧ್ಯಾಹ್ನ ೩ ರಿಂದ ಸಂಜೆ ೭ ರವರೆಗೆ |
| 27 | ಮಂಗಳವಾರ | ಸ್ವಾಮಿ ಸುಬೋಧಾನಂದ ಜಯಂತಿ |
| 29 | ಗುರುವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ